ಬೀದರ್ ಜಿಲ್ಲೆಯ ರೋಗಿಗಳಿಗೆ ಚಿಕಿತ್ಸೆ ನೀಡಲು ಹೆಚ್ಚು ಕೇಂದ್ರಗಳನ್ನು ತೆರೆಯುವುದು.

3777 - ಶ್ರೀ ನಾರಾಯಣರಾವ್ ಮನ್ನಹಳ್ಳಿ (ಬೀದರ್) : ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

1) *ಬೀದರ್ ಜಿಲ್ಲೆಯ ರೋಗಿಗಳಿಗೆ ಚಿಕಿತ್ಸೆ ನೀಡಲು ಈಗಿರುವ ಆಸ್ಪತ್ರೆ, ಪ್ರಾಥಮಿಕ ಆರೋಗ್ಯ ಕೇಂದ್ರಗಳು ಮತ್ತು ಪ್ರಾಥಮಿಕ ಆರೋಗ್ಯ ಘಟಕಗಳು ಸಾಕಾಗದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?*

2) *ಹಾಗಿದ್ದಲ್ಲಿ, ಹೊಸ ಆಸ್ಪತ್ರೆ ಅಥವಾ ಪ್ರಾಥಮಿಕ ಆರೋಗ್ಯ ಕೇಂದ್ರ ಮತ್ತು ಘಟಕಗಳಲ್ಲಿ ಹಾಸಿಗೆ ಸಂಖ್ಯೆ ಏರಿಸುವ ಪ್ರಸ್ತಾವನೆಯು ಸರ್ಕಾರದ ಮುಂದಿದೆಯೇ?*

3) *ಸರ್ಕಾರದ ನಿಯಮದ ಪ್ರಕಾರ ಜನಸಂಖ್ಯೆ - ವೈದ್ಯರ ಪ್ರಮಾಣದ ಮಾದರಿ ಏನು?*

ಶ್ರೀ ಜಿ. ಪುಟ್ಟಸ್ವಾಮಿಗೌಡ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು):

1) ಬಂದಿದೆ.

2) ಇದೆ.

3) ಜನ ಸಂಖ್ಯೆ : ವೈದ್ಯರ ಪ್ರಮಾಣ 2450:1

ಬೀದರ್ ಜಿಲ್ಲಾ ಆಸ್ಪತ್ರೆಗೆ ಔಷಧಿಯನ್ನು ಕೊಳ್ಳಲು ಮಂಜೂರಾದ ಹಣದ ಮೊತ್ತ

3776 - ಶ್ರೀ ನಾರಾಯಣರಾವ್ ಮನಹಳ್ಳಿ (ಬೀದರ್) : ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೀದರ್ ಜಿಲ್ಲಾ ಆಸ್ಪತ್ರೆಗೆ ಔಷಧಿಯನ್ನು ಕೊಳ್ಳಲು ಮಂಜೂರಾಗಿರುವ ಹಣವೆಷ್ಟು?

ಆ) ಈ ಮಂಜೂರಾಗಿರುವ ಹಣ ಈ ಆಸ್ಪತ್ರೆಗೆ ಔಷಧಗಳಿಗೆ ಕನಿಷ್ಠ ಅವಶ್ಯಕತೆಯನ್ನು ಪೂರೈಸುತ್ತದೆಯೇ?

ಇ) ಇಲ್ಲದಿದ್ದರೆ ಸರ್ಕಾರ ಹೆಚ್ಚುವರಿ ಹಣ ಮಂಜೂರು ಮಾಡಲು ಏನು ಕ್ರಮ ಕೈಗೊಂಡಿದೆ?

ಶ್ರೀ ಜಿ. ಪುಟ್ಟಸ್ವಾಮಿಗೌಡ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು):

ಅ) 1991-92ನೇ ಸಾಲಿಗೆ ಔಷಧಿಗಾಗಿ ರೂ.11.5 ಲಕ್ಷವನ್ನು ಮಂಜೂರು ಮಾಡಿದೆ.

ಆ) ಸಾಕಾಗುತ್ತದೆ.

ಇ) ಉದ್ಭವಿಸುವುದಿಲ್ಲ.

ಅಧ್ಯಕ್ಷರು :- ಪ್ರಶ್ನೋತ್ತರಗಳ ಪಟ್ಟಿಯನ್ನು ಮಂಡಿಸಲಾಯಿತು.